**<u>ದಿನಾಂಕಃ 12.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಪಾಟೀ ಸವಾಲು ವಾದಿ ಪರ ಶ್ರೀ. ಎಸ್ ಬಿ ಡಿ ವಕೀಲರಿಂದಃ-</u>**

ನಾನು, ವಾದಿಯರು ಮತ್ತು ಪ್ರತಿವಾದಿ ಸಂಖ್ಯೆ.1, 3 ಮತ್ತು 4 ಕುನ್ನೇಗೌಡರ ಮಕ್ಕಳು ಎಂದರೆ ಸರಿ. ದಾವಾ ಷೆಡ್ಯೂಲ್ 1 ರಿಂದ 3ನೇ ಐಟಂ ಸ್ವತ್ತುಗಳು ನನ್ನ ತಂದೆಯ ಹೆಸರಿನಲ್ಲಿ ಖಾತೆ ಇವೆ ಎಂದರೆ ಸರಿ. ದಾವಾ ಷೆಡ್ಯೂಲ್ 4ನೇ ಸ್ವತ್ತು ನನ್ನ ತಾತ ತಿಮ್ಮೇಗೌಡರ ಹೆಸರಿನಲ್ಲಿ ಖಾತೆ ಇದೆ ಎಂದರೆ ಸರಿ. ನನ್ನ ತಾತ ತಿಮ್ಮೇಗೌಡರ ಮಗನಾದ ನನ್ನ ತಂದೆ ಕುನ್ನೇಗೌಡರೆ ದಾವಾ ಐಟಂ 4ರ ಸ್ವತ್ತಿನ ವಾರಸುದಾರ ಎಂದರೆ ಸರಿ. ದಾವಾ ಐಟಂ ಸ್ವತ್ತುಗಳನ್ನು ತಾವು ಮತ್ತು ತಮ್ಮ ಸಹೋದರ ಸಹೋದರಿಯರೆ ಈ ಹಿಂದೆಯೇ ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ತಮ್ಮ ಪ್ರಮಾಣ ಪತ್ರದಲ್ಲಿ ಹೇಳಿದ್ದು ಈ ಸಂಬಂಧ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ದಾವಾ ಐಟಂ ನಂ.3ರ ಸ್ವತ್ತನ್ನು ನನ್ನ ತಂದೆ ನನ್ನ ಹೆಸರಿಗೆ ಪಂಚಾಯಿತಿ ಪಾಲು ಪಾರಿಖತ್ ಮೂಲಕ ಬಿಟ್ಟು ಕೊಟ್ಟಿರುತ್ತಾರೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ 5ದರ ಸ್ವತ್ತುಗಳನ್ನು ಒಟ್ಟು ಕುಟುಂಬದಿಂದ ಖರೀದಿ ಮಾಡಿದ ಸ್ವತ್ತುಗಳು ಎಂದರೆ ಸರಿಯಲ್ಲ. ನಾನೇ ಕುಟುಂಬದ ಕರ್ತ ಆಗಿದ್ದು ದಾವಾ ಐಟಂ ನ 5ರ ಸ್ವತ್ತನ್ನು ಒಟ್ಟು ಕುಟುಂಬದ ಪರವಾಗಿ ನಾನೇ ಕ್ರಯಪತ್ರವನ್ನು ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ ಸ್ವತ್ತನ್ನು ನಾನೊಬ್ಬನೇ ಖರೀದಿ ಮಾಡಲು ನನ್ನ ವೈಯಕ್ತಿಕ ಆದಾಯದ ಮೂಲ ಇರಲಿಲ್ಲ ಎಂದರೆ ಸರಿಯಲ್ಲ. ವಾದಿಯರಿಗೆ ಮತ್ತು ನನ್ನನ್ನು ಹೊರತುಪಡಿಸಿ ಇನ್ನುಳಿದ ಪ್ರತಿವಾದಿಗಳಿಗೆ ದಾವಾ ಆಸ್ತಿಗಳಲ್ಲಿ ಭಾಗ ಕೊಡಬೇಕಾಗುತ್ತದೆ ಎಂದು ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ